# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-2319/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 30/06/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಮಲ್ಲಿಕಾರ್ಜುನ ಎನ್. ಶೆಟ್ಟಿ, ಹನುಮಾನ್‌ನಗರ, ಬೆಳಗಾವಿ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಮಲ್ಲಿಕಾರ್ಜುನ ಎನ್. ಶೆಟ್ಟಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಜನಸಾಮಾನ್ಯರಲ್ಲಿ ಮಳೆ ನೀರು ಕೋಯ್ಲು ಬಗ್ಗೆ ಅರಿವು ಮೂಡಿಸುವ ಯೋಜನೆಯಡಿಯಲ್ಲಿ ವಲಯ ಆಯುಕ್ತರ ಕಛೇರಿ, ಬೆಳಗಾವಿ ಇಲ್ಲಿ ಮಳೆ ನೀರು ಕೋಯ್ಲು ಯೋಜನೆಯನ್ನು ಅನುಷ್ಠಾನಗೊಳಿಸಲು 2012ನೇ ಇಸವಿಯಲ್ಲಿ ರೂ.2,53,143/- ಅನ್ನು ಖರ್ಚು ಮಾಡಲಾಗಿರುತ್ತದೆ. ಈ ಮಳೆ ನೀರು ಕೋಯ್ಲು ಯೋಜನೆ ಕಾಮಗಾರಿಯ ಅಡಿಯಲ್ಲಿ ಬೇಕಾದ ಕಟ್ಟಡ ಮತ್ತು ಸಾಮಗ್ರಿ ನಿರ್ವಹಣೆಯಲ್ಲಿ ಕಾಮಗಾರಿ ಕಳಪೆಮಟ್ಟದ್ದಾಗಿದ್ದು, ಇದರಿಂದ ಮಳೆ ನೀರು ಕೋಯ್ಲು ಕಾರ್ಯಗತವಾಗದೇ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿರುತ್ತದೆ. ಸದರಿ ಯೋಜನೆಯಡಿ ನಿರ್ಮಿಸಿರುವ ಹೊಂಡದಲ್ಲಿ ಸ್ವಲ್ಪ ನೀರು ಸಹ ಇಳಿದಿರುವುದಿಲ್ಲ. ಮಳೆ ನೀರು ಶೇಖರಣೆಯಾಗುವ ಬದಲು ಎಲ್ಲವೂ ಸೋರಿಕೆಯಾಗಿ ಹರಿದು ಹೋಗಿರುತ್ತದೆ. ಎಷ್ಟೋ ಜಾಗಗಳಲ್ಲಿ ಇಟ್ಟಿರುವ ಡ್ರಂಗಳಲ್ಲಿ ಕಸ ಕಟ್ಟಿಕೊಂಡು ಸರಿಯಾಗಿ ನೀರು ಹರಿದಿರುವುದಿಲ್ಲ. ಈ ಕಾಮಗಾರಿಯ ಉಸ್ತುವಾರಿಯನ್ನು ಮತ್ತು ಕಾಮಗಾರಿ ನಂತರ ಮಳೆ ನೀರು ಕೋಯ್ಲಿಗೆ ಸಂಬಂಧಿಸಿದ ಡ್ರಂಗಳ ನೀರಿನ ಪೈಪ್‌ಗಳನ್ನು ಸುವ್ಯವಸ್ಥೆಯಲ್ಲಿರುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಎದುರುದಾರರುಗಳು ಸರಿಯಾಗಿ ನಿರ್ವಹಿಸದೆ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರುಗಳ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಪ್ರಾದೇಶಿಕ ಆಯುಕ್ತರ ಕಛೇರಿಯ ಕಟ್ಟಡದಲ್ಲಿ ಮಳೆ ನೀರು ಕೋಯ್ಲು ಯೋಜನೆಯ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದ್ದು, ಇದನ್ನು ತಾಂತ್ರಿಕ ಅನುಮೋದನೆ ಪಡೆದ ನಂತರ ಟೆಂಡರ್‌ಗಳನ್ನು ಕರೆದು ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಕಾಮಗಾರಿಯನ್ನು ಮೂರನೇ ಪಾರ್ಟಿ ಪರಿಶೀಲಿಸಿದ ನಂತರ ಸದರಿ ಕಾಮಗಾರಿಯು ತೃಪ್ತಿಕರವಾಗಿರುತ್ತದೆ ಎಂದು ಪ್ರಮಾಣ ಪತ್ರ ನೀಡಿರುತ್ತಾರೆ. ಸದರಿ ಮಳೆ ನೀರು ಕೋಯ್ಲಿನ ಘಟಕವನ್ನು ನೋಡಿಕೊಳ್ಳುವ ಜವಾಬ್ದಾರಿಯು ಲೋಕೋಪಯೋಗಿ ಇಲಾಖೆಗೆ ಸೇರಿದ್ದಾಗಿದ್ದು, ಇದರಲ್ಲಿ ತನ್ನ ಪಾತ್ರ ಏನು ಇಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ತನ್ನ ಮೇಲಿನ ಈ ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

3. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ದೂರಿನಲ್ಲಿ ತಿಳಿಸಿರುವ ಮಳೆ ನೀರು ಕೋಯ್ಲಿನ ಯೋಜನೆಯನ್ನು ತಮ್ಮ ಇಲಾಖೆಯಿಂದ ಅನುಷ್ಠಾನಗೊಳಿಸಿರುವುದಿಲ್ಲ. ಇದನ್ನು ಪ್ರಾದೇಶಿಕ ಆಯುಕ್ತರ ಕಛೇರಿ ವತಿಯಿಂದ ಅನುಷ್ಠಾನಗೊಳಿಸಲಾಗಿದೆ. ಆದ್ದರಿಂದ, ಇದರಲ್ಲಿ ತನ್ನ ಪಾತ್ರ ಏನು ಇಲ್ಲವೆಂದು ತಿಳಿಸಿರುತ್ತಾರೆ.

4. 2ನೇ ಎದುರುದಾರರಾದ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಉತ್ತರ ಉಪವಿಭಾಗ ನಂ.2, ಬೆಳಗಾವಿ ನಗರ ಪಾಲಿಕೆ, ಬೆಳಗಾವಿ ಇವರಿಂದ ಆಕ್ಷೇಪಣೆ ಬಂದಿರುವುದಿಲ್ಲ. ಸದರಿಯವರಿಗೆ ಕಳುಹಿಸಿಕೊಟ್ಟಿದ್ದ ನೋಟೀಸ್ ದಿನಾಂಕ 22/04/2015 ರಂದು ಜಾರಿಯಾಗಿರುತ್ತದೆ ಎಂದು ಸಿಪಿಎಂ, ಜಿಪಿಒ ಇವರು ವರದಿ ಮಾಡಿರುತ್ತಾರೆ. ಆದ್ದರಿಂದ, 2ನೇ ಎದುರುದಾರರ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

5. 1 ಮತ್ತು 3ನೇ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ 1 ಮತ್ತು 3ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳು ನಿರಾಧಾರವಾಗಿದ್ದು, ಸುಳ್ಳಿನಿಂದ ಕೂಡಿರುತ್ತದೆ ಎಂದು ಸದರಿ ಮಳೆ ನೀರು ಕೋಯ್ಲು ಘಟಕವನ್ನು ಗುಣಮಾಪನದ ಬಗ್ಗೆ ಪರಿಶೀಲಿಸಿರುವ 3ನೇ ಪಾರ್ಟಿಯವರು ಮಳೆಗಾಲದಲ್ಲಿ ಪರಿಶೀಲಿಸಿದಲ್ಲಿ ಸದರಿ ಮಳೆ ನೀರು ಕೋಯ್ಲಿನ ಘಟಕದ ಗುಣಮಟ್ಟದ ಬಗ್ಗೆ ತಿಳಿದು ಬರುತ್ತಿತ್ತೆಂದು ಹಾಗೂ ಸದರಿ ಘಟಕದ ಕಾಮಗಾರಿಯು ಕಳಪೆಮಟ್ಟದ ಕಾಮಗಾರಿ ಎಂದು ತಿಳಿದು ಬರುತ್ತಿತ್ತೆಂದು ತಿಳಿಸಿರುತ್ತಾರೆ.

6. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ಬೆಳಗಾವಿಯ ಆರಕ್ಷಕ ಅಧೀಕ್ಷಕರಿಗೆ ವಹಿಸಲಾಗಿದ್ದು, ಸದರಿಯವರು ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ಬೆಳಗಾವಿಯ ಆರಕ್ಷಕ ನಿರೀಕ್ಷಕರಿಗೆ ವಹಿಸಿರುತ್ತಾರೆ. ತನಿಖಾಧಿಕಾರಿಯಾದ ಆರಕ್ಷಕ ನಿರೀಕ್ಷಕರು ತನಿಖಾ ವರದಿಯನ್ನು ಸಲ್ಲಿಸಿದ್ದು, ಸದರಿ ತನಿಖಾ ವರದಿಯಲ್ಲಿ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಕಛೇರಿಯ ಆವರಣದಲ್ಲಿ 2010ನೇ ಸಾಲಿನಲ್ಲಿ ಮಳೆ ನೀರು ಕೋಯ್ಲು ಕಾಮಗಾರಿಯನ್ನು ಮಹಾನಗರ ಪಾಲಿಕೆ, ಬೆಳಗಾವಿ ರವರು ಎಸ್‌ಎಫ್‌ಸಿ ಮುಕ್ತ ನಿಧಿ ಯೋಜನೆಯಡಿ ಕೈಗೊಂಡಿರುತ್ತಾರೆ. ಈ ಯೋಜನೆಯನ್ನು ಪ್ರಾದೇಶಿಕ ಆಯುಕ್ತರ ಕಛೇರಿಯ ಆವರಣದಲ್ಲಿ ಕೈಗೊಂಡಿದ್ದರೂ ಸಹ ಮಹಾನಗರ ಪಾಲಿಕೆಯವರು ಮತ್ತು ಲೋಕೋಪಯೋಗಿ ಇಲಾಖೆ ಬೆಳಗಾವಿ ರವರು ಯೋಜನೆಯ ಬಳಕೆಯ ಬಗ್ಗೆ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತಂದಿರುವುದಿಲ್ಲ. ಸದರಿ ಕಾಮಗಾರಿಯು ದಿ:21/01/2010 ರಂದು ಪೂರ್ಣಗೊಂಡ ನಂತರ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ಬೆಳಗಾವಿ ಇವರು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರಿಗೆ ಸದರಿ ಘಟಕವನ್ನು ನಿರ್ವಹಿಸಲು ದಿ:07/–04/2014 ರಂದು ಪತ್ರ ಬರೆದಿದ್ದು, ಅದು ದಿ:22/04/2014 ರಂದು ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರ ಕಛೇರಿಯಲ್ಲಿ ಸದರಿ ಪತ್ರ ಸ್ವೀಕೃತವಾಗಿರುತ್ತದೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ಬೆಳಗಾವಿ ಇವರು ಸದರಿ ಯೋಜನೆಯ ಘಟಕವನ್ನು ಲೋಕೋಪಯೋಗಿ ಇಲಾಖೆ ಬೆಳಗಾವಿ ಇವರಿಗೆ 4 ವರ್ಷದ ನಂತರ ಹಸ್ತಾಂತರಿಸಿರುತ್ತಾರೆಂದು ಹಾಗೂ ಕಾರ್ಯನಿರ್ವಾಹಕ ಅಧಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರು ಯೋಜನೆಯ ನಿರ್ವಹಣೆಯನ್ನು ವಹಿಸಿಕೊಂಡ ನಂತರ ಯಾವ ಉದ್ದೇಶಕ್ಕಾಗಿ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತೋ, ಆ ಉದ್ದೇಶಕ್ಕಾಗಿ ಸದರಿ ಘಟಕವನ್ನು ಸದುಪಯೋಗಪಡಿಸಿಕೊಳ್ಳದೇ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರು ಅನುಷ್ಠಾನಗೊಳಿಸುವಲ್ಲಿ ವಿಫಲರಾಗಿರತ್ತಾರೆಂದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಈಗ ಸಧ್ಯದಲ್ಲಿ ಮಹಾನಗರ ಪಾಲಿಕೆ, ಬೆಳಗಾವಿ ಇವರು ಇಂಗುಗುಂಡಿಯನ್ನು ಸ್ವಚ್ಛಗೊಳಿಸಿ ಮಳೆ ನೀರು ಇಂಗುವ ವ್ಯವಸ್ಥೆಯನ್ನು ಮಾಡಿರುತ್ತಾರೆ ಮತ್ತು ರೋಟರಿ ಕ್ಲಬ್ ಬೆಳಗಾವಿ ಇವರ ಮುಖಾಂತರ ಮಳೆ ನೀರು ಸಂಗ್ರಹವಾದ ಟ್ಯಾಂಕಿಗೆ ಪಂಪ್‌ಸೆಟ್ ಮತ್ತು ಪೈಪ್‌ಲೈನ್ ಅನ್ನು ಅಳವಡಿಸಿ ಮಳೆ ನೀರನ್ನು ಮರು ಬಳಕೆ ಮಾಡಲು ಸಹಾಯಕ ಪ್ರಾದೇಶಿಕ ಆಯುಕ್ತರ ಅನುಮತಿಯನ್ನು ಪಡೆದಿರುವುದು ಕಂಡು ಬರುತ್ತದೆ ಎಂದು ಸಹ ತಿಳಿಸಿರುತ್ತಾರೆ.

7. ಈ ಹಂತದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಳೆ ನೀರು ಕೋಯ್ಲು ಘಟಕದ ನಿರ್ವಹಣೆಯ ಬಗ್ಗೆ ವರದಿಯನ್ನು ತರಿಸಲು ಆದೇಶಿಸಲಾಗಿದ್ದು, ಅದರಂತೆ, ಕಾರ್ಯಕಾರಿ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಇವರು ತಮ್ಮ ಪತ್ರದ ಮುಖೇನ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಕಛೇರಿಯಲ್ಲಿ ಮಹಾನಗರ ಪಾಲಿಕೆ, ಬೆಳಗಾವಿ ವತಿಯಿಂದ 2010 ರಲ್ಲಿ ಮಳೆ ನೀರು ಕೋಯ್ಲು ಘಟಕವನ್ನು ಅನುಷ್ಠಾನಗೊಳಿಸಿದ್ದು, ಸದರಿ ಘಟಕವನ್ನು ಮುಂದಿನ ನಿರ್ವಹಣೆಗಾಗಿ ಭೌತಿಕವಾಗಿ ಹಸ್ತಾಂತರಿಸಲಾಗಿದ್ದು, ಅದರ ಪ್ರತಿಯನ್ನು ತಮ್ಮ ಪತ್ರದೊಡನೆ ಅಡಕ ಮಾಡಿ ಸಲ್ಲಿಸಿರುತ್ತಾರೆ ಹಾಗೂ ಸದರಿ ಘಟಕದ ಮುಂದಿನ ನಿರ್ವಹಣೆಯನ್ನು ತಮ್ಮ ಇಲಾಖೆಯಿಂದ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿರುತ್ತಾರೆ. ಸದರಿ ಘಟಕದ ಛಾಯಾಚಿತ್ರವನ್ನು ಸಹ ಹಾಜರುಪಡಿಸಿರುತ್ತಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಉತ್ತರ ವಲಯ–2, ಮಹಾನಗರ ಪಾಲಿಕೆ ಬೆಳಗಾವಿ ಇವರು ನೀರು ಕೋಯ್ಲು ಘಟಕವನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪವಿಭಾಗ ನಂ.1, ಬೆಳಗಾವಿ ಇವರಿಗೆ ಹಸ್ತಾಂತರಿಸಿರುವ ಬಗ್ಗೆ ಅನುಬಂಧ–1 ಅನ್ನು ಹಾಜರುಪಡಿಸಿದ್ದು, ಸದರಿ ಘಟಕವನ್ನು ಲೋಕೋಪಯೋಗಿ ಇಲಾಖೆಯವರಿಗೆ ದಿ:24/04/2017ರಂದು ಹಸ್ತಾಂತರಿಸಿರುವುದಾಗಿ ಕಂಡು ಬರುತ್ತದೆ. ಇದಕ್ಕೂ ಪೂರ್ವದಲ್ಲಿ ಸದರಿ ಘಟಕದ ಉಸ್ತುವಾರಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರ ವಲಯ–2, ಮಹಾನಗರ ಪಾಲಿಕೆ ಬೆಳಗಾವಿ ಇವರು ನಿರ್ವಹಿಸುತ್ತಿದ್ದರೆಂದು, ಸದರಿ ಅನುಬಂಧ–1 ರಿಂದ ಕಂಡು ಬರುತ್ತದೆ. ಆದರೆ, ತನಿಖಾಧಿಕಾರಿಯವರು ಸದರಿ ಮಳೆ ನೀರು ಕೋಯ್ಲು ಘಟಕ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಳಗಾವಿ ಮಹಾನಗರ ಪಾಲಿಕೆ ಇವರು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಸದರಿ ಘಟಕದ ನಿರ್ವಹಣೆ ಕುರಿತು ದಿ:07/04/2014 ರಂದು ಪತ್ರ ಬರೆದಿದ್ದು, ಅದು ದಿ:22/04/2014 ರಂದು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ. ಆದರೂ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಳಗಾವಿ ಮಹಾನಗರ ಪಾಲಿಕೆ ಇವರು ಸದರಿ ಯೋಜನೆಯ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರಿಗೆ 4 ವರ್ಷದ ನಂತರ ಹಸ್ತಾಂತರಿಸಿರುವುದು ಕಂಡು ಬರುತ್ತದೆ ಎಂದು ಹಾಗೂ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರು ಸದರಿ ಘಟಕದ ನಿರ್ವಹಣೆಯನ್ನು ವಹಿಸಿಕೊಂಡ ನಂತರ ಯಾವ ಉದ್ದೇಶಕ್ಕಾಗಿ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳದೇ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರು

ವಿಫಲರಾಗಿರುವುದು ಕಂಡು ಬರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಆದರೆ, ಮೇಲೆ ಹೇಳಿದಂತೆ ಕಾರ್ಯಕಾರಿ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಇವರು ಸಲ್ಲಿಸಿರುವ ವರದಿಯೊಡನೆ ಅಡಕ ಮಾಡಿರುವ ಅನುಬಂಧ-1 ಅನ್ನು ಪರಿಶೀಲಿಸಿದಲ್ಲಿ ಮಳೆ ನೀರು ಕೋಯ್ಲು ಘಟಕವನ್ನು ದಿ:24/04/2017 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಉತ್ತರ ವಲಯ-2, ಮಹಾನಗರ ಪಾಲಿಕೆ, ಬೆಳಗಾವಿ ಇವರು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿರುವುದು ಕಂಡು ಬರುತ್ತದೆ. ಆದ್ದರಿಂದ, ಮಹಾನಗರ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಸದರಿ ಮಳೆ ನೀರು ಕೋಯ್ಲು ಘಟಕವು ದಿ:21/01/2010 ರಂದು ಪೂರ್ಣಗೊಂಡ ನಂತರ ದಿನಾಂಕ 24/04/2017ರವರೆಗೆ ಅದನ್ನು ಸದುಪಯೋಗಪಡಿಸಿಕೊಳ್ಳದೇ ಮತ್ತು ಸದರಿ ಘಟಕವನ್ನು ಸರಿಯಾಗಿ ನಿರ್ವಹಿಸದೇ ಇರುವುದು ಕಂಡು ಬಂದಿರುತ್ತದೆ.

**8.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸದರಿ ಮಳೆ ನೀರು ಕೋಯ್ಲು ಘಟಕದ ನಿರ್ವಹಣೆ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಹಾಗೂ ಅದನ್ನು ಸದುಪಯೋಗಪಡಿಸಿಕೊಳ್ಳಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Ananda 30/6

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 30/6/17